**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಸಿ ಸಿ ನಂ. 68/2020**

**ಫಿರ್ಯಾದಿದಾರರು** *:-* ನೆಲೋಗಿ ಪೊಲೀಸ್ ಠಾಣೆ

***: ವಿರುದ್ದ :***

**ಆರೋಪಿತರು***:*

1. ವೀರೇಶ ತಂದೆ ಸುಬ್ಬಣ್ಣ ಮಿಣಜಗಿ
ವಃ 30 ವರ್ಷ, ಉಃ ಚಾಲಕ
ಸಾಃ ನೆಲೋಗಿ, ತಾಃ ಜೇವರ್ಗಿ

2. ಭಾಗಮ್ಮ ಗಂಡ ಸಿದ್ರಾಮಪ್ಪ ಜಗಲಗೊಂಡ
ವಃ 46 ವರ್ಷ, ಉಃ ಮನೆಕೆಲಸ
ಸಾಃ ನೆಲೋಗಿ, ತಾಃ ಜೇವರ್ಗಿ

3. ನಿಂಗಪ್ಪ ತಂದೆ ಚಂದ್ರಶಾ ತಳವಾರ
ವಃ 55 ವರ್ಷ, ಉಃ ಒಕ್ಕಲುತನ
ಸಾಃ ಕೌಲಗಾ, ತಾಃ ಜಿಃ ಕಲಬುರ್ಗಿ

**ದೋಷಾರೋಪಣೆ**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

ಆರೋಪಿತರಾದ ನೀವು ದಿನಾಂಕ 15-07-2019 ರಂದು ರಾತ್ರಿ 09-00 ಗಂಟೆ ಸಮಯದಲ್ಲಿ ನೆಲೋಗಿ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ನೆಲೋಗಿ ಸೀಮಾಂತರದ ನಾಗರಾಣಿ ಬ್ರಿಡ್ಜ ಹತ್ತಿರ ಭೀಮಾ ನದಿಯಲ್ಲಿ 1ನೇ ಆರೋಪಿತನು 2ನೇ ಆರೋಪಿತರ ಸೋನಾಲಿಕಾ ಟ್ರ್ಯಾಕ್ಟರ ನಂ.ಕೆಎ-32/ಟಿಬಿ-3358, ಟ್ರಾಲಿ ನಂ.ಕೆಎ-32/ಟಿಬಿ-3359 ನೆದ್ದರಲ್ಲಿ, ಮತ್ತು 3ನೇ ಆರೋಪಿತನ ಟ್ರ್ಯಾಕ್ಟರ ನಂ.ಕೆಎ-32/ಟಿಎ-7766, ಟ್ರಾಲಿ ನಂ.ಕೆಎ-32/ಟಿಎ-7767 ನೆದ್ದರಲ್ಲಿ, ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ, ಕಳ್ಳತನ ಮಾಡುವ ಉದ್ದೇಶದಿಂದ ಸದರಿ ಟಿಪ್ಪರನಲ್ಲಿ ಮರಳನ್ನು ಕಳ್ಳತನದಿಂದ

ತುಂಬಿರುತ್ತಿರಿ, ಆದ್ದರಿಂದ ನೀವು ಭಾ. ದಂ. ಸಂ. ಕಲಂ **379** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ **16-07-2025** ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**<u>ಆರೋಪಿಗಳ ಹೇಳಿಕೆ</u>**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ: ಆ-1 ಆ-2

ಆ-3

ಪ್ರಶ್ನೆ -2: ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ: ಆ-1 ಆ-2

ಆ-3

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ **16-07-2025** ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.